## ಪ್ರಶಸ್ತಿಗಳು

- ಮದ್ರಾಸ್ ಸಂಗೀತ ಅಕಾಡೆಮಿಯಿಂದ 'ಸರ್ ಹೆನ್ರಿ ವಿಲ್ಸನ್' ಪ್ರಶಸ್ತಿ
- ಕರ್ನಾಟಕ ಗಾನಕಲಾಪರಿಷತ್ತಿನ 'ಗಾನಕಲಾ ಭೂಷಣ' ಬಿರುದು
- ಚೆನ್ನೈಯ ನಾರದ ಗಾನಸಭಾದಿಂದ ಜೀವಮಾನ ಸಾಧಕ ಪ್ರಶಸ್ತಿ
- ಪಾಲ್ಘಾಟ್ ಮಣಿ ಅಯ್ಯರ್ ಸ್ಮಾರಕ ಪ್ರಶಸ್ತಿ
- 'ಮೃದಂಗ ಕಲಾ ಶಿರೋಮಣಿ' ಬಿರುದು
- ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾಶ್ರೀ'
- ಕಂಚಿ ಕಾಮಕೋಠಿ ಪೀಠದಿಂದ 'ಗೋಲ್ಡನ್ ಮೃದಂಗಮ್' ಬಿರುದು
- ಅವನಿ ಶಂಕರ ಮಠ ಮತ್ತು ಇಸ್ಕಾನ್‌ನಿಂದ ಆಸ್ಥಾನ ವಿದ್ವಾನ್ ಬಿರುದು
- ಶ್ರೀಕಂಠ ಶಂಕರ ಪ್ರಶಸ್ತಿ
- ಸ್ವರಲಯ ಕಾಲೇಜ್ ಆಫ್ ಮ್ಯೂಸಿಕ್ ಸಂಸ್ಥೆ ಕೊಡುವ 'ಸ್ವರಲಯ ಶೃಂಗ' ಪ್ರಶಸ್ತಿ
- ಪಳನಿ ಸುಬ್ರಹ್ಮಣ್ಯ ಪಿಳ್ಳೈ ಸ್ಮರಣಾರ್ಥ 'ಲಯ ಕಲಾ ನಿಪುಣ' ಪ್ರಶಸ್ತಿ...



ವಿದ್ವಾನ್ ಆರ್.ಕೆ. ಶ್ರೀಕಂಠನ್ ಟ್ರಸ್ಟ್ ವತಿಯಿಂದ 'ಶ್ರೀಕಂಠ ಶಂಕರ' ಪ್ರಶಸ್ತಿ ಪಡೆಯುತ್ತಿರುವ ಮಣಿ.
ಚಿತ್ರ ರಂಜು ಪಿ.

'ಸಂಗೀತ ಕಲಾರತ್ನ ಟಿ.ಎ.ಎಸ್. ಮಣಿ ಅವರು ಸಂಗೀತಕ್ಕೆ ನೀಡಿದ ಕೊಡುಗೆ ಅತ್ಯಮೋಘವಾದದ್ದು. ಮೃದಂಗ ಎಂದರೆ ಅದು ವಾದ್ಯ ಸಂಗೀತ, ಹಾಡುಗಾರಿಕೆ. ತಾಳವಾದ್ಯ.. ಹೀಗೆ ಎಲ್ಲ ಪ್ರಕಾರಗಳಿಗೂ ಅಗತ್ಯವಿರುವ ಪ್ರಮುಖ ವಾದ್ಯ. ಮಣಿ ಅವರು ಇವೆಲ್ಲದಕ್ಕೂ ನ್ಯಾಯ ಒದಗಿಸಿದ ಮಹಾನ್‌ವಿದ್ವಾಂಸರು. ಅವರು ಹಲವು ಸೋಲೊ ಕಛೇರಿ, ಪಕ್ಕವಾದ್ಯ ಕಛೇರಿ ನೀಡಿ ಸಂಗೀತಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆಗುರುತು ಮೂಡಿಸಿದ್ದಾರೆ' ಎಂದು ನೆನಪಿಸಿಕೊಳ್ಳುತ್ತಾರೆ ಮಣಿ ಅವರ ನಿಕಟ ಒಡನಾಡಿ ಹಾಗೂ ಖ್ಯಾತ ಮೃದಂಗ ವಿದ್ವಾಂಸರಾದ ಎಚ್.ಎಸ್. ಸುಧೀಂದ್ರ.

'ಮಣಿ ಅವರು ಒಳ್ಳೆಯ ಪಕ್ಕವಾದ್ಯಗಾರರು. ಗಾಯನವಿರಲಿ, ವಾದನ ಕಛೇರಿಗಳಿರಲಿ ಬಹಳ ಸಾತ್ವಿಕ ನುಡಿಸಾಣಿಕೆ ಇವರದು. ನುಡಿಸುವ ಶೈಲಿಯೂ ಬಹಳ ಶಾರ್ಪ್ ಆಗಿತ್ತು. ತನಿಯಾವರ್ತನದಲ್ಲಿ ಘನವಿದ್ವಾಂಸರು ತನಿ ಬಿಟ್ಟಾಗ ಜಾಸ್ತಿ ಹೊತ್ತು ತನಿ ಏಳೀತಾ ಇರಲಿಲ್ಲ. ಕ್ಲಿಷ್ಟಕರವಾದ ತಾಳದ ಎಡಪುಗಳನ್ನು ಸರಳವಾಗಿ ನುಡಿಸುತ್ತಿದ್ದರು. ಯಾವ ತಾಳವೇ ಇರಲಿ, ಕಛೇರಿಗಳಲ್ಲಿ ಅದರ ಲೆಕ್ಕಾಚಾರವನ್ನು ಕ್ಷಣಮಾತ್ರದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ನುಡಿಸಿ ಚಪ್ಪಾಳೆ ಗಿಟ್ಟಿಸಿ 'ಎಂಪೈರ್ ಆಫ್ ಪರ್ಕಷನ್' ಎಂದೇ ಹೆಸರುವಾಸಿಯಾಗಿದ್ದವರು' ಎಂದು ಹೇಳುತ್ತಾರೆ ವಿದ್ವಾನ್ ಸುಧೀಂದ್ರ. 'ಜಯನಗರದಲ್ಲಿರುವ 'ಸುಸ್ವರಲಯ ಸಂಗೀತ ಕಾಲೇಜಿ'ನೊಂದಿಗೆ ನಿಕಟ ಸಂಬಂಧ ಇತ್ತು . ಹಲವು ಪ್ರಾತ್ಯಕ್ಷಿಕೆ ನಡೆಸಿಕೊಟ್ಟಿದ್ದರು. ಅವರ ಅಗಲಿಕೆ ಬಹಳ ನೋವು ತಂದಿದೆ' ಎಂದು ಖೇದಗೊಳ್ಳುತ್ತಾರೆ ಈ ವಿದ್ವಾಂಸರು.




ವಿದುಷಿ ಡಿ.ಕೆ. ಪಟ್ಟಮ್ಮಾಳ್ ಅವರಿಗೆ ಮೃದಂಗ ಸಹಕಾರ ನೀಡುತ್ತಿರುವ ಟಿ.ಎ.ಎಸ್. ಮಣಿ

### ನೆನಪು ಮಾತ್ರ

ಮೃದಂಗ ವಾದನದಲ್ಲಿ ಕೀರ್ತಿಶಿಖರಕ್ಕೇರಿದ್ದ ಮಣಿ ಅವರಿಗೆ ಎಂಬತ್ತೆರಡು ವರ್ಷ ವಯಸ್ಸಾಗಿತ್ತು. (ಜನನ 1938) ಈ ವಯಸ್ಸಿನಲ್ಲಿಯೂ ಅವರ ಜೀವನ, ಸಂಗೀತ ಪ್ರೀತಿ ಮೆಚ್ಚುವಂಥದ್ದೇ. ಬೆಂಗಳೂರಿನ ಜಯನಗರದಲ್ಲಿ ರಾಮಲಲಿತ ಕಲಾಮಂಡಳಿಯ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾಗ ಮಾರ್ಚ್ 14ರಂದು ಮಣಿ ಅವರು ಕೀರ್ತಿಶೇಷರಾದದ್ದು ಸಂಗೀತ ಕ್ಷೇತ್ರದಲ್ಲಿ ಶೂನ್ಯ ಆವರಿಸಿದಂತಾಗಿದೆ. ಈ ಅದ್ಭುತ ಕಲಾವಿದರು ಉಳಿಸಿಹೋದ ಸಂಗೀತ ಸಂಪತ್ತು ಸಂಗೀತಾಸಕ್ತರಿಗೆ ದಾರಿದೀಪದಂತಿದೆ.